ದಮ್ಮು ಜಾಸ್ತಿಯಾಗಿ ಹಾಸಿಗೆ ಹಿಡಿದಿರುವ ಗಂಡನಿದ್ದಾನೆ. ಅಪ್ಪನನ್ನು ಕಳೆದುಕೊಂಡು ಯಾವ ಆಶ್ರಯವೂ ಇಲ್ಲದ ಅಮ್ಮ ನನ್ನೊಂದಿಗಿದ್ದಾಳೆ. ಇವೆಲ್ಲ ಬಂಧನಗಳನ್ನು ತ್ಯಜಿಸಿ ನಿಮ್ಮೊಂದಿಗೆ ನಾನು ಬರುವುದಾದರೂ ಹೇಗೆ. ಇದು ನನ್ನದೊಬ್ಬಳದೇ ಪರಿಸ್ಥಿತಿಯಲ್ಲ, ಈ ಸೋನಾಗಾಚಿಯ ಮುಕ್ಕಾಲು ಭಾಗದಷ್ಟು ಹೆಣ್ಣುಗಳ ಬಂಧನದ ಬದುಕು. ಯಾರು ಹೇಗೆ ಬದುಕಿದರೂ ಕಡೆಗೊಂದು ದಿನ ಸಾವು ಇದ್ದೇ ಇದೆಯಲ್ಲಾ... ಆ ಸತ್ಯವನ್ನು ನಂಬಿಕೊಂಡೇ ಇಲ್ಲಿನ ಜನ ಸದಾ ಖುಷಿಯಿಂದ ಇರುತ್ತಾರೆ. ನೋವು ಸಂಕಟಗಳಲ್ಲೂ ಬೇರೆಯವರಿಗೆ ತೃಪ್ತಿ ನೀಡುವ, ಸುಖ ಕೊಡುವ ಈ ದೇಹದ ವ್ಯಾಪಾರವಿದೆಯಲ್ಲ ಇದೊಂದು ಶ್ರೇಷ್ಠವಾದ ವ್ಯಾಪಾರವೆಂಬ ಭಾವನೆಯನ್ನು ಸದಾ ಎದೆಗೆ ತುಂಬಿಕೊಂಡಿರುತ್ತೇವೆ. ಅದೂ ಅಲ್ಲದೆ, ದೊಡ್ಡ ಆಸರೆ ಸಿಕ್ಕಿತೆಂದು ನಾನು ನಿಮ್ಮೊಂದಿಗೆ ಬಂದರೆ ಖಂಡಿತವಾಗಿಯೂ ಖುಷಿಯಿಂದ ಕ್ಷಣಮಾತ್ರವೂ ಇರುವುದಿಲ್ಲ. ಇನ್ನು ನಮ್ಮನ್ನೆಲ್ಲಾ ಕಟ್ಟಿಕೊಂಡು ನೀವು ಊರಿಗೋದರೆ ಖಂಡಿತವಾಗಿಯೂ ನಿಮ್ಮನ್ನು ಹುಚ್ಚರೆಂದೇ ಕರೆಯುತ್ತಾರೆ. ಮತ್ತು ನೀವು ಕೂಡಾ ಒಂದು ಕ್ಷಣವೂ ಖುಷಿ ನೆಮ್ಮದಿಗಳಿಂದ ಇರಲಾರಿರಿ. ಈ ಸೋನಾಗಾಚಿಯ ವೇಶ್ಯೆಯರೊಂದಿಗೆ ದೇಹ ಸುಖ ಪಡೆಯಲು ಬರುವ ಮುಕ್ಕಾಲು ಪಾಲು ಗಂಡಸರು ಮದುವೆಯಾಗಿ ಹೆಂಡತಿಯರಿರುವವರೇ ಆಗಿರುತ್ತಾರೆ. ಮತ್ತು ಈ ಸೋನಾಗಾಚಿಯಲ್ಲಿ ಗಂಡು ವೇಶ್ಯೆಯರೂ ಇದ್ದಾರೆ. ಅವರಿಗೆ ಶ್ರೀಮಂತ ಹೆಣ್ಣು ಗಿರಾಕಿಗಳೂ ಇದ್ದಾರೆ. ಸುಖದ ಸೂತ್ರಗಳನ್ನು ಯಾವ ಗುಣಸಂಖ್ಯೆಗಳಿಂದ ಕಟ್ಟುತ್ತೀರಿ ನೀವು...'' ಅವಳ ಮಾತು ಮುಗಿಯುವುದಕ್ಕೂ, ಮಧುಕೇಶ್ವರ ಒಳ ಬರುವುದಕ್ಕೂ ಒಂದೇ ಆಗಿತ್ತು. ರಾತ್ರಿ ಹತ್ತು ಗಂಟೆಯಾಗಿತ್ತು. ಅವಳಿಗೆ ಅಲ್ಲಮಪ್ರಭು ಹಣವನ್ನು ಕೊಡಲಿಲ್ಲ. ಅವಳೂ ಕೇಳಲಿಲ್ಲ. ಅವರಿಬ್ಬರ ಮಧ್ಯೆ ಸುಖದ ವ್ಯಾಪಾರ ನಡೆದಿರಲಿಲ್ಲ. ಅಲ್ಲಿಂದ ಮಧುಕೇಶ್ವರನೊಂದಿಗೆ ಹೊರಬಂದಿದ್ದ. ``ಇನ್ನೊಂದಿಬ್ಬರು ಪರಿಚಯದವರಿದ್ದಾರೆ, ಈ ಸೋನಾಳಂತೆ. ಅವರದು ಏನೇ ಹೆಸರಿದ್ದರೂ ಗಿರಾಕಿಗಳ ಹತ್ತಿರ ಸೋನಾ ಎಂತಲೇ ಹೇಳುವುದು. ನೋಡ್ತೀಯಾ, ಇಲ್ಲಿ ರಾತ್ರಿ ಹಗಲಿಗೆ ವ್ಯತ್ಯಾಸವೇನೂ ಇಲ್ಲ. ಅಂದ ಹಾಗೆ, ಸೋನಾಳಿಗೆ ಮೊದಲೇ ಹಣ ಕೊಟ್ಟಿದ್ದಾ? ಅವಳ ಬೆಲೆ ಎರಡರಿಂದ ಮೂರು ಸಾವಿರ. ಪಿಂಪ್ ಮೂಲಕ ಹೋದರೆ ನಾಲ್ಕೈದು ಸಾವಿರ...'' ಎಂದು ನಕ್ಕ ಮಧುಕೇಶ್ವರ. ಅಲ್ಲಮಪ್ರಭು, ``ಇಲ್ಲ, ನಾನವಳಿಗೆ ಒಂದು ನಯಾಪೈಸೆಯನ್ನೂ ಕೊಡಲಿಲ್ಲ. ಮತ್ತೆ ಇನ್ನ್ಯಾರನ್ನೂ ನೋಡುವುದು ಬೇಡ, ಸೀದಾ ಹೋಟೆಲ್ಲಿಗೆ ಹೋಗೋಣ...'' ಎಂದ ಅನ್ಯಮನಸ್ಕನಾಗಿ. ``ಸರಿ, ನಾನು ಕೊಡ್ತೀನಿ ಬಿಡು, ನಾಳೆ ಸಿಗ್ತಾಳೆ ನನಗೆ. ಸಂಜೆ ಏಳರಿಂದ ರಾತ್ರಿ ಹತ್ತರತನಕ ಮಾತ್ರವೇ ಅವಳದು ಅಮೂಲ್ಯ ಸಮಯ. ಅಂತಿಂಥ ಗಿರಾಕಿಗಳ ಜೊತೆ ಮಲಗಲು ಅವಳು ಯಾವೊತ್ತೂ ಒಪ್ಪುವುದಿಲ್ಲ. ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಅವಳಂತೆ ಕಾಪಾಡಿಕೊಂಡಿರುವವರು ಸೋನಾಗಾಚಿಯಲ್ಲಿ ಬೆರಳೆಣಿಕೆಯಷ್ಟು ಮಂದಿ ಮಾತ್ರ ಸಿಗ್ತಾರೆ...'' ಎಂದ ಮಧುಕೇಶ್ವರ.

ಉಪಸಂಹಾರ: ಸೋನಾಳ ಮಾತುಗಳಲ್ಲಿ ತನ್ನನ್ನು ಮದುವೆಯಾಗುವ ಇಚ್ಛೆಯಿರುವುದು ಅಲ್ಲಮಪ್ರಭುವಿನ ಆತ್ಮಕ್ಕೆ ತಿಳಿದಿದ್ದೇ ಒಂದು ಅಚ್ಚರಿಯ ಸಂಗತಿ. ಮೋಹನ್ ಕಿಣಿಯನ್ನು ಹಿಡಿದು ಊರಿನಲ್ಲಿನ ಎರಡೆಕರೆ ಅಡಿಕೆ ತೋಟವನ್ನು ಒಳ್ಳೆಯ ಬೆಲೆಗೆ ಮಾರಿದ್ದಾನೆ. ಸೋನಾಗಾಚಿಯ ಪಕ್ಕದ ಬಡಾವಣೆಯಲ್ಲಿಯೇ ಮೂರು ರೂಮಿನ ಒಂದು ಒಳ್ಳೆಯ ಅಪಾರ್ಟ್‌ಮೆಂಟನ್ನು ಕೊಂಡಿದ್ದಾನೆ. ಎರಡು ಕೋಟಿ ರೂಪಾಯಿಗಳನ್ನು ಬ್ಯಾಂಕಿನಲ್ಲಿ ಡಿಪಾಸಿಟ್ ಮಾಡಿದ್ದಾನೆ. ಅದರಿಂದ ತಿಂಗಳಿಗೆ ಎಂಬತ್ತು ಸಾವಿರ ಬಡ್ಡಿ ಬರುತ್ತಿದೆ. ತನ್ನ ಹೆಂಡತಿ ಸೋನಾಳ ಹೆಸರಿನಲ್ಲಿ ಮನೆಯ ಬಳಿಯೇ 'ಸೋನಾ ಜ್ಯೂವೆಲರಿ ಮಾರ್ಟ್'

